# ಏಳು ನಾರಾಯಣ ಏಳು ಲಕ್ಷ್ಮೀರಮಣ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Note:** The singer has followed these lyrics.

ರಾಗ: ಭೂಪಾಳಿ ತಾಳ: ಝಂಪೆ

ಏಳಯ್ಯ ಬೆಳಗಾಯಿತು ll ಪ ll

ಏಳು ನಾರಾಯಣ ಏಳು ಲಕ್ಷ್ಮೀ ರಮಣ
ಏಳು ಶ್ರೀ ಗಿರಿಯೊಡೆಯ ವೆಂಕಟೇಶ ll ಅಪ ll

ದಾಸರೆಲ್ಲರು ಬಂದು ಧೂಳಿ ದರ್ಶನಗೊಂಡು
ಲೇಸಾಗಿ ತಾಳ ದಂಡಿಗೆಯ ಪಿಡಿದು
ಕೇಶವನೆ ನಿಮ್ಮ ಸಿರಿ ನಾಮಾವನೆ ಸ್ಮರಿಸುತಲಿ
ವಾಸುದೇವನೆ ಉದಯದಲಿ ಪಾಡುತಿಹರು ll 1 ll

ಕಾಸಿದ್ದ ಹಾಲುಗಳ ಕಾವಡಿಯ ತುಂಬಿಟ್ಟು
ಲೇಸಾಗಿ ಕೆನೆ ಮೊಸರು ಬೆಣ್ಣೆಯನು ಮೆದ್ದು
ಶೇಷ ಶಯನನೆ ಏಳು ಸಮುದ್ರ ಮಥನವ ಮಾಡು
ದೇಶ ಕೆಂಪಾಯಿತೇಳಯ್ಯ ಹರಿಯೇ ll 2 ll

ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ
ಸುರರು ತಂದಿಹರಯ್ಯ ಸುಜನರೊಡೆಯ
ಅರವಿಂದ ಲೋಚನನೆ ಕೋಳಿ ಕೂಗಿತು ಕೇಳು
ಪುರಂದರ ವಿಠ್ಠಲನೆ ಬೆಳಗಾಯಿತು ll 3 ll

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಧೂಳಿ ದರ್ಶನ** = ಯಾತ್ರಿಕರು ಕ್ಷೇತ್ರಕ್ಕೆ ಬಂದ ಕೂಡಲೆ ತೆಗೆದುಕೊಳ್ಳುವ ದರ್ಶನ

**ಕಾವಡಿ** = ಕಂಬಿ, ಅಡ್ಡ

**Classification:** Keerthane
**Ankita:** purandara vittala
**Location:** NA
**Category:** Vishnu Stuti, Srinivasa Stuti
**Sub-Category:** Vishnu, srinivasa, Narayana, hAlu, benne, shesha, Samudra, hoovu, pushpa, koli, udaya, beligge, keshava, tirupati
**Pravachana:** NA
**Explanation:** NA